ಮಲ್ಲಿಕಾರ್ಜುನ, ಸುರಧೇನುಪುರ

ಮಕ್ಕಳಿಗೆ ಗೊಂಬೆ; ಯುವಕರಿಗೆ ರಂಭೆ. ಮುದುಕರಿಗೆ?



ಚೊಂಬೇ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಕುಳಿತಲ್ಲಿಂದಲೇ ಚಂದ್ರನವರೆಗೆ ನೋಡಬಲ್ಲ ನನಗೆ 350 ಕಿ.ಮೀ. ದೂರದ ಬೆಂಗಳೂರನ್ನು ನೋಡಲು ಆಗುತ್ತಿಲ್ಲವಲ್ಲ?

ಬೆಂಗಳೂರಿನದೇ ತಪ್ಪು. ಅದು ಇನ್ನೂ ಚಂದ್ರನ ಎತ್ತರಕ್ಕೆ ಬೆಳೆದಿಲ್ಲ.

ಹೆಚ್.ಎಂ. ಚನ್ನವೀರಯ್ಯ

ನಿಮಗೆ ಶ್ವಾಸ ಮುಖ್ಯವೋ, ವಿಶ್ವಾಸ ಮುಖ್ಯವೋ?

ನಾನಿರುವವರೆಗೆ ಶ್ವಾಸ ಇದ್ದೇ ಇರುತ್ತದೆ. ಸಂಪಾದಿಸಬೇಕಾದ ವಿಶ್ವಾಸವೇ ಮುಖ್ಯ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಹುಡುಗನ ಸಿಕ್ಸ್ ಪ್ಯಾಕ್ ಬದಲಿಗೆ ಪ್ಯಾಕೇಜ್ ಕೇಳುವ ಹುಡುಗಿಯ ಪೋಷಕರಿಗೆ ಏನೆನ್ನಬೇಕು?



ಶಾಪಿಂಗ್ ಲಗೇಜ್ ಎತ್ತಲಷ್ಟೇ ಸಿಕ್ಸ್ ಪ್ಯಾಕ್ ಉಪಯುಕ್ತ. ಬಿಲ್ ಎತ್ತಲು ಪ್ಯಾಕೇಜೇ ಮುಖ್ಯ.

ಬಿ. ಚಂದ್ರೇಗೌಡ, ಬೆಂಗಳೂರು

ಮದ್ಯಪಾನಕ್ಕೆ ಎಣ್ಣೆ ಹೊಡೆಯುವುದು ಎನ್ನುವುದು ಸರಿಯೆ?

ಕುಡಿದವರ ಮುಖದಲ್ಲಿ ಹೊಳೆಹೊಳೆವ ಬೆವರು ಎಣ್ಣೆಯಂತೆಯೇ ಕಾಣುವುದರಿಂದ, ಸರಿ.

ಪಿ. ಜಯವಂತ ಪೈ, ಕುಂದಾಪುರ

ಹಾಲಿಗೂ, ಆಲ್ಕೋಹಾಲಿಗೂ ವ್ಯತ್ಯಾಸವೇನು?

ಆಲ್ಕೋಹಾಲಿನ ಬೆಲೆಯನ್ನು ಎಷ್ಟೇ ಏರಿಸಿದರೂ ಸ್ಟ್ರೈಕ್ ನಡೆಯುವುದಿಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಸಮಸ್ಯೆಗಳಿಗೆ ಕಾಲದ ಹಂಗಿಲ್ಲ. ಆದರೆ ಕೇಳುಗರ ಪ್ರಶ್ನೆಗಳಿಗೆ?

ಸಮಕಾಲೀನ ಅಥವಾ ಸಾರ್ವಕಾಲಿಕ ಆಗಬೇಕಾದ ಅನಿವಾರ್ಯತೆ.

ಪಿ.ಜೆ. ರಾಘವೇಂದ್ರ, ಮೈಸೂರು

ರಾಜಕಾರಣಿಗಳನ್ನು 'ಅಪ್ಪಾಜಿ' ಎನ್ನುವ ಹಿಂಬಾಲಕರಿಗೆ ಏನೆನ್ನಬಹುದು?

ಊಸರವಳ್ಳಿ! ಗೆದ್ದಾಗ 'ಅಪ್ಪಾಜಿ' ಎನ್ನುವರು ಸೋತಾಗ 'ಡೌನ್ ಹೋ ಜೀ' ಎಂದು ದೂರ ಸರಿಯುತ್ತಾರೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಬಂಗಾರದಂತಹ ಬದುಕನ್ನು ಭಾರ ಮಾಡಿಕೊಳ್ಳುವ ಮಂದಿ ಹೆಚ್ಚಾಗುತ್ತಿದ್ದಾರಲ್ಲ?

ಆ ಬದುಕಿನ ಮೇಕಿಂಗ್ ಚಾರ್ಜ್, ವೇಸ್ಟೇಜುಗಳ ತೀವ್ರತೆಗೆ ಶಕ್ತಿಹೀನರಾದರಂತೆ.

ಶಿವಕುಮಾರ ಬಂಡೋಳಿ, ಹುಣಸಗಿ

ಈಗಿನ ಮಂಗಗಳೇಕೆ ಮಾನವರಾಗುತ್ತಿಲ್ಲ?

ಉತ್ತಮವಾಗಲು ಬದಲಾಗಬೇಕೇ ವಿನಹ ಅಧಮವಾಗಲು ಅಲ್ಲವೆಂದು ಅವಕ್ಕೆ ತಿಳಿದಿದೆ.

ಸುಲೋಚನ ಜೆ. ರಾವ್, ಬೆಂಗಳೂರು

ಮನುಷ್ಯನಿಗೆ ಎರಡು ನಾಲಿಗೆ ಇದ್ದಿದ್ದರೆ ಏನಾಗುತ್ತಿತ್ತು?

ವಿಷಸರ್ಪದೊಡನೆ ಹೋಲಿಸಲು ಮತ್ತೊಂದು ಕಾರಣ ಸಿಕ್ಕಂತಾಗುತ್ತಿತ್ತು.

ಬೂಕನಕೆರೆ ವಿಜೇಂದ್ರ, ಮೈಸೂರು

ಬಡ ಹುಡುಗರನ್ನು ಯಾರೂ ಪ್ರೀತಿಸುವುದಿಲ್ಲವಲ್ಲ?

ಆ ಹುಡುಗರ ತಾಯಂದಿರು ನಿಮ್ಮ ಮಾತು ತಪ್ಪು ಎನ್ನುತ್ತಿದ್ದಾರೆ.

ಜಗದೀಶ ಬಿ. ಹೊಸೂರು, ಮೈಸೂರು

ಗತಿಸಿದ ಮಹನೀಯರು ಬುವಿಗಿಳಿದು ತಮ್ಮ ಪುತ್ಥಳಿಗಳನ್ನು ನೋಡಿದರೆ ಹೇಗೆ ಪ್ರತಿಕ್ರಿಯಿಸಬಹುದು?

'ನಮ್ಮ ಜೊತೆಜೊತೆಗೆ ನಮ್ಮ ತತ್ವಗಳ ಆಚರಣೆಯನ್ನೂ ನಿಲ್ಲಿಸಿದ್ದಾರಲ್ಲಾ, ಅಕಟಕಟಾ!' ಎಂದು.

## ಬಹುಮಾನಿತ ಪ್ರಶ್ನೆ

ಬಿ. ಬಸವರಾಜ್, ಹರಿಹರ

ಕೆಲವು ಅಮ್ಮಂದಿರು ಅಪ್ಪನನ್ನು ಮಕ್ಕಳೆದುರು ವಿಲನ್‌ನಂತೆ ಬಿಂಬಿಸುವುದೇಕೆ?

ಅಪಕ್ವ ಮನಸ್ಸು. ಅಪಕ್ವ ಅಮ್ಮ ಮಕ್ಕಳ ಭವಿಷ್ಯಕ್ಕೆ ಗುಮ್ಮ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಕಿವಿ, ನಾಲಿಗೆ ಬಿಟ್ಟು 'ಮೂಗು' ತೂರಿಸೋದು ಅಂತಾರೆ. ಏಕೆ ರಾಮ್?

ಸುದ್ದಿಯ ವಾಸನೆ ಹಿಡಿಯಲು ಮೂಗೇ ಸರಿ.

ಎಂ.ಎ. ಕುಮಾರ್, ಬೆಂಗಳೂರು

ಗೃಹಿಣಿಯರು ಬಳಸುವ ಉಪಕರಣಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ?

ನಾಲಿಗೆ.

ರತ್ನಜ, ಮೈಸೂರು

ಹೆಂಗಸರು ಯಾವಾಗಲೂ ಹೈ ಹೀಲ್ಡ್ ಚಪ್ಪಲಿ ಧರಿಸಲು ಬಯಸುವುದೇಕೆ?



ರೋಮಿಯೋಗಳಿಗೆ ಬಾರಿಸಲು ಒಳ್ಳೆಯ ಗ್ರಿಪ್ ಸಿಗುತ್ತದೆಂದು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ವಧುಗಳೇ ಹುಡುಗರ ಪಾಲಿಗೆ 'ವರ' ಆಗುತ್ತಿರುವರಲ್ಲ?

ಸರಿಯೇ; ಅವನು ಕಸ; ಇವಳು ವರ; ಇಬ್ಬರೂ ಸೇರಿದರೆ ಬಾಳು ಕಸವರ.

ರಾಮಸ್ವಾಮಿ, ಭೀಮನಕಟ್ಟೆ

ನಮ್ಮೂರಿನ ವಲಸೆಗಾರರೇ ತುಂಬಿರುವ ಪಕ್ಷವನ್ನು ಪಕ್ಷಾಂತರಿಗಳ ಪಕ್ಷ ಎನ್ನಬಹುದೆ?

ಜಂಕ್ಷನ್ ಪಾರ್ಟಿ ಎನ್ನಿ. ಯಾವ ಬೋಗಿ ಯಾವ ಎಂಜಿನ್ನಿಗೆ ತಗುಲಿಕೊಳ್ಳುತ್ತೋ ಹೇಳಲಾಗದು.

ಅಮರಯ್ಯಾ ಪತ್ರಿಮಠ, ಸುರಪುರ

ಸುಜ್ಞಾನದ ಸುಧೆ ಹರಿಯುವುದೆಲ್ಲಿ?

ಅಧ್ಯಯನ ವಿವೇಕಗಳೆಂಬ ದಂಡೆಗಳ ನಡುವಿನಲ್ಲಿ.

■ ರಾಮ್